ನೀವು ಕೇಳಿದಿರಿ?

ನಖಾತೆ ಆನಂದರಾವ್, ಬೆಂಗಳೂರು

*ಬೆಂಗಳೂರಿನಲ್ಲಿ ಹಂತಹಂತವಾಗಿ ಸಾಯುತ್ತಿರುವ ಕನ್ನಡವನ್ನು ಉಳಿಸಲು ಸೂಕ್ತವಾದ ಸ್ಲೋಗನ್ ಕೊಡಿ...?*




ಮೆಟ್ರೋ ಎಂಬ ಒಂದೇ ಪದ ಸಾಕು– ಅನ್ಯ ಭಾಷೆಗಳನ್ನು ಮೆಟ್ರೋ, ಕನ್ನಡದ ಬಲವನ್ನು ಕಟ್ರೋ....!

ಮಹಾವೀರ ಕಾಸರ, ಶಿವಮೊಗ್ಗ

*ಸದನದ ಬಾವಿಯಲ್ಲಿ ಏನು ಇರುತ್ತವೆ?*

ಅವಕಾಶಗಳತ್ತ ಕುಪ್ಪಳಿಸುವ ಕಪ್ಪೆಗಳು!

ಬಿ. ಚಂದ್ರೇಗೌಡ, ಬೆಂಗಳೂರು

*ಮದ್ಯಸೇವನೆಯ ನಂತರ ಕೆಲವರಿಗೆ ಆಂಗ್ಲಪದಗಳು ಪುಂಖಾನುಪುಂಖವಾಗಿ ಹೊರಬರಲು ಏನು ಕಾರಣ?*

ಒಳಹೋದ ಮದ್ಯ 'ಬ್ರಿಟಿಷರೆ ಹೊಟ್ಟೆ ಬಿಟ್ಟು ತೊಲಗಿ' ಆಂದೋಲನ ಕೈಗೊಳ್ಳುವುದರ ಫಲವಂತೆ.

ಅಮರಯ್ಯಾ ಪತ್ರಿಮಠ, ಸುರಪೂರ

*ಓಲ್ಡ್ ಈಸ್ ಗೋಲ್ಡ್ ಎನ್ನುವವರೂ ಹಿರಿಯರನ್ನು ಅಲಕ್ಷಿಸುವುದೇಕೆ?*



ಹಿರಿಯರು ಸುರುಟಿ ಮುರುಟಿ ಹೋಗಿರುವುದರಿಂದ ಅವರು ಗೋಲ್ಡ್ ಅಲ್ಲ– ರೋಲ್ಡ್ ಗೋಲ್ಡ್ ಅಂತೆ!

ಪ್ರಶಾಂತ್ ಮಯ್ಯ, ಸಾಗರ

*ಸಾವಿಗೆ ಸಾವಿನ ಭಯ ಇಲ್ವಾ?*

ಅದಕ್ಕಿಲ್ಲ; ಸಾವಿನ ಸಾವನ್ನು ನಿಯಂತ್ರಿಸಬೇಕಾದ ನಮಗೂ ಇಲ್ಲ. ಸಾವಿನ ಸಾವೇ ಹುಟ್ಟು.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಕಾಲಕ್ಕೆ ಹೊತ್ತು ಎನ್ನುತ್ತಾರಲ್ಲ, ಏಕೆ?*

ಪ್ರತಿ ಕ್ಷಣವೂ ನಮ್ಮನ್ನು ಹೊತ್ತು ಸಾಗುವುದರಿಂದ.

ಟಿ.ಎ. ನಾರಾಯಣಮೂರ್ತಿ, ಮೈಸೂರು

*ಸುಳ್ಳೇ ಹೇಳದ ವ್ಯಕ್ತಿ ಹಿಮಾಲಯಕ್ಕೆ ಹೋದರೆ ಸಿಗುತ್ತಾನೆಯೆ?*

ಅಷ್ಟು ದೂರವೇನು ಬೇಡ; ಹತ್ತಿರ ಇರುವ ಮೂಗರ ಶಾಲೆಯಲ್ಲೇ ಸಿಗುತ್ತಾರೆ.

ಹಾಡ್ಯ ಬ. ಜಯಾನಂದ, ಮೈಸೂರು

*ಜೀವನದಲ್ಲಿ ಎಲ್ಲರೂ ಒಂದಿಲ್ಲೊಂದು ಹುಡುಕಾಟ ನಡೆಸುತ್ತಾರಂತೆ. ರಾಜಕಾರಣಿಗಳು?*

ಅವರದು ಹುಡುಕಾಟ ಅಲ್ಲ – ಹುಡುಗಾಟ.

ಬಸವಣ್ಣ ಹೊನಖಾಂಡೆ, ಬಸವನಬಾಗೇವಾಡಿ

*ಸುಖ, ಶಾಂತಿ, ನೆಮ್ಮದಿ ನಿಮ್ಮೂರಿನ ಕಾಳಸಂತೆಯಲ್ಲಿ ಸಿಗುತ್ತಾ ಶಿವ?*

ಸ್ಟಾಕ್ ಕಡಿಮೆ ಇದೆ. ಬೇಗ ಬನ್ನಿ – ಕೊಂಡೊಯ್ಯಲು ನಿಮ್ಮದೇ ಆದ ತೃಪ್ತಿಯ ಚೀಲ ತನ್ನಿ.

ಬೂಕನಕೆರೆ ವಿಜೇಂದ್ರ, ಮೈಸೂರು

*ಇಲ್ಲೊಬ್ಬಳು ನಟನೊಬ್ಬನನ್ನು ಕಲಿಯುಗದ ಕರ್ಣನಿಗೆ ಹೋಲಿಸುತ್ತಾಳಲ್ಲಾ...?*

ತಿಳಿಯಿತು. ಕರ್ಣ ಎಂದರೆ ಡಯಾಗೊನಲ್ – ಆ ನಟ ಕುಡಿದಾಗ ಹಾಗೆಯೇ ನಡೆಯುವುದಂತೆ.

ಹೇಮಾವತಿ ಜೈನ್, ಹೂವಿನಹಡಗಲಿ

*ಉತ್ತರ ಚೆಲುವೆಯ ಸೌಂದರ್ಯಕ್ಕೆ ದಿನಾ ಎಷ್ಟು ಲೀಟರ್ ನೀರು ಕುಡಿಯುತ್ತೀರಿ ಸಾರ್?*

ಓದುಗರ ಪ್ರಶ್ನೆಗಳು ಕುಡಿಸುವಷ್ಟು!

ರವೀಂದ್ರನಾಥ ಯಡಹಳ್ಳಿ, ಬೀಳಗಿ

*ಅಂಗೈಯಲ್ಲಿರುವ ರೇಖೆಗೂ, ಲಕ್ಷ್ಮಣರೇಖೆಗೂ ಇರುವ ವ್ಯತ್ಯಾಸವೇನು ಶಿವಾ?*

ಇದು ದಿಕ್ಸೂಚಿ; ಅದು ದಿಗ್ಬಂಧನ.

ಲಲಿತ ತೋಂಟಾರಾಧ್ಯ, ಗುಬ್ಬಿ

*ಹಿಂದೆ ಸತಿ ಸಹಗಮನ ಪದ್ಧತಿ ಇತ್ತು. ಈಗ?*

ಈಗಲೂ ಇದೆ. ಸತಿಪತಿಯರು ಪಕ್ಕಪಕ್ಕ ಕುಳಿತು ಸೀರಿಯಲ್‌ಗಳತ್ತ 'ಸಹ–ಗಮನ' ನೀಡುತ್ತಾರೆ!

ಮೋಹನರಾಜು ಎಸ್.ಎ., ಶಿವಮೊಗ್ಗ

*ಕೋಪ ಮನುಷ್ಯನ ಮೊದಲ ಶತ್ರು. ಎರಡನೆಯ ಶತ್ರು ಯಾರು?*

ಮೊದಲ ಶತ್ರುವಿನ ಕಾರಣದಿಂದ ಮಾಡಿದ್ದನ್ನು ಉಜ್ಜೀ ಉಜ್ಜೀ ತೋರಿಸುವ ಚಾನಲ್.

## ಬಹುಮಾನಿತ ಪ್ರಶ್ನೆ

ಸುಶೀಲಾ ರಾಮಣ್ಣ, ಬೆಂಗಳೂರು

*ಬೆಂಗಳೂರು ಅಚ್ಚುಮೆಚ್ಚೆನುವ ಹೊರಗಿನವರು ಕನ್ನಡ ಕಲಿಯುವುದಿಲ್ಲವಲ್ಲಾ...?*

ತಪ್ಪು ಅವರದಲ್ಲ; ಕನ್ನಡಿಗರದು. ಅವರು ಕ ಕಲಿಯುವಷ್ಟರಲ್ಲಿ ಇವರು ಕಹೋನಾ ಪ್ಯಾರ್ ಹೈ ಕಲಿತುಬಿಟ್ಟಿರುತ್ತಾರೆ!

ಫಾಲನೇತ್ರ ಸಜ್ಜನ, ಶಿರಸಿ

*ದೈವೀ ಗುಣ ಧಾರಣೆ ಮಾಡುವುದು ಹೇಗೆ?*

ಯಾವ ದೇವರದು? ದುರ್ಗಿ, ಕಾಳಿಯದಾದರೆ ಸೀರಿಯಲ್ ನೋಡಿ ಕಲಿಯಿರಿ.

ಪೇಂಟರ್ ಪಾಪು, ಸಂತೇಮರಹಳ್ಳಿ

*ಸಂಬಂಧಿಕರು ಸಂಪಾದನೆಗೇ ಹೆಚ್ಚು ಬೆಲೆ ಕೊಡುತ್ತಾರೆ. ಏಕೆ?*

**sum** ಬಂಧಿಗಳಾದ್ದರಿಂದ.

ಕಾಳೀಹುಂಡಿ ಶಿವಕುಮಾರ್, ಮೈಸೂರು

*ಸ್ವೀಟ್ ಡ್ರೀಮ್ಸ್ ಬೀಳಲು ಏನು ಮಾಡಬೇಕು ರಾಮ್‌ಜೀ....?*



ನಿದ್ರೆ!

ಕೆ.ಎನ್. ಗೋಪಾಲಕೃಷ್ಣ, ಬೆಂಗಳೂರು

*ಕುದುರೆಯನ್ನು ಕಡಿವಾಣ ಹಾಕಿ ಹತೋಟಿಗೆ ತರಬಹುದು. ಮನುಷ್ಯನನ್ನು?*

ಅವನ ಕೈಯಿಂದ ತಾಳಿ ಕಟ್ಟಿಸಿ; ಮೂಗುದಾರ ತಾನಾಗಿಯೇ ಬೀಳುತ್ತದೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಕೆಟ್ಟವರು ಬಹು ಬೇಗ ಪ್ರಚಾರಕ್ಕೆ ಬರುತ್ತಾರೆ. ಒಳ್ಳೆಯವರು ಬೆಳಕಿಗೆ ಬರುವುದಿಲ್ಲ. ಏನು ಕಾರಣ?*

ನಾತ ಲಕ್ಷಣ; ದುರ್ನಾತಕ್ಕೆ ಸುವಾಸನೆಯನ್ನು ಮೆಟ್ಟಿ ಹಬ್ಬುವ ಶಕ್ತಿ ಇರುತ್ತದೆ.

ಪಿ. ಶಂಕರಪ್ಪ, ಶಿವಮೊಗ್ಗ

*ಇಂದು ಜನರು ಕುರಿಗಳಾಗುತ್ತಿರುವುದಕ್ಕೆ ಕಾರಣ ಸರ್ಕಾರವೋ, ಅಧಿಕಾರಿಗಳೋ? ಸರಿಯುತ್ತರ ನೀಡದಿದ್ದರೆ ತಲೆ ಹೋಳಾಗಲಿದೆ.*

ಎರಡೂ ಅಲ್ಲ; ಕುರಿತು ಕೇಳದೆ ಕುರಿಯಂತೆ ಕೇಳುವ ಜನರೇ.

■ ರಾಮ್